S.C. 53/2024.

**ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಸಂಚಾರಿ ನ್ಯಾಯಾಲಯ ಹುನಗುಂದ, ಇವರ ನ್ಯಾಯಾಲಯದಲ್ಲಿ.**

**ಸತ್ರ ಮೊಕದ್ದಮೆ ಸಂಖ್ಯೆ 53/2024.**

| | | | |
|---|---|---|---|
| ಹೆಸರು | : | ಮಲ್ಲಪ್ಪ ವಗ್ಗರ | ಫ್ರಾಸಾ-11 |
| ತಂದೆಯ ಹೆಸರು | : | ಹಣಮಪ್ಪ | ಚಾಸಾ-11 |
| ವಯಸ್ಸು | : | 65 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಾಸಸ್ಥಳ | : | ನಂದವಾಡಗಿ | |

ದಿನಾಂಕಃ 20-02-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ಮೃತ ಬಸವರಾಜ ನನ್ನ ಮಗ. 2 ನೇ ಆರೋಪಿ ಮೃತ ಬಸವರಾಜನ ಹೆಂಡತಿ. ಚಾಸಾ-1 ನನ್ನ ಹೆಂಡತಿ. ಚಾಸಾ-12,13 ನನ್ನ ಸಹೋದರರು. ಚಾಸಾ-14 ನನ್ನ ತಂದೆ. ನನಗೆ 4 ಜನ ಹೆಣ್ಣು ಮಕ್ಕಳು, 2 ಜನ ಗಂಡು ಮಕ್ಕಳು.

2 ನೇ ಆರೋಪಿಯ ಮದುವೆ ಸುಮಾರು 12 ವರ್ಷಗಳ ಹಿಂದೆ ನನ್ನ ಮಗ ಬಸವರಾಜನೊಂದಿಗೆ ಆಗಿತ್ತು. ಅವರಿಗೆ ಮಾಳಪ್ಪ, ಚೆನ್ನಪ್ಪ ಹಾಗೂ ಮೇಘವ್ವ ಎಂಬ 3 ಜನ ಮಕ್ಕಳು. ಮೃತ ಬಸವರಾಜ 2 ನೇ ಆರೋಪಿಯ ಜೊತೆ ಅವಳ ತವರು ಮನೆಯಲ್ಲಿ ಸುಮಾರು 5 ವರ್ಷಗಳಿಂದ ವಾಸ ಮಾಡುತ್ತಿದ್ದ.

ಈಗ ಸುಮಾರು ಒಂದೂವರೆ ವರ್ಷಗಳ ಹಿಂದೆ ನಾನು ನಂದವಾಡಗಿ ಗ್ರಾಮದಲ್ಲಿದ್ದಾಗ ಬಸವರಾಜನ ಕೊಲೆಯಾಗಿದೆ ಎಂದು ಊರ ಜನರು ಹೇಳಿದರು. ಅವರ ಹೆಸರು ಗೊತ್ತಿಲ್ಲ. ನಂತರ ನಾನು, ಚಾಸಾ-1 ಇಬ್ಬರೇ ಹೋಗಿ ನೋಡಲಾಗಿ ಬ್ಯಾಗರ ಹಳ್ಳದ ಹತ್ತಿರ ಕೊಲೆಯಾಗಿತ್ತು. ಬಸವರಾಜನ ಕೈ ಮುರಿದಿತ್ತು, ತಲೆ ಒಡೆದಿತ್ತು, ಕಣ್ಣುಗಳನ್ನು ಕಟ್ಟಿದ್ದರು ಹಾಗೂ ಗುಪ್ತಾಂಗಕ್ಕೆ ನೋವಾಗಿತ್ತು. ನಂತರ ಆರೋಪಿ-2 ಮತ್ತು ಇನ್ನೊಬ್ಬ ಹುಡುಗ ಸೇರಿ ಕೊಲೆ ಮಾಡಿದ್ದಾರೆ ಎಂದು ಊರ ಜನರು ಹೇಳಿದ್ದಾರೆ, ಆದರೆ ಅವರ ಹೆಸರು ಗೊತ್ತಿಲ್ಲ. ಆದರೆ ಇಬ್ಬರೂ ಸೇರಿ ಕೊಲೆ ಮಾಡಿದ್ದಾರೆ ಎಂದು ಊರ ಜನರು ಹೇಳಿರುತ್ತಾರೆ. ಪೋಲಿಸರ ಮುಂದೆ ಘಟನೆ ಬಗ್ಗೆ ಹೇಳಿಕೆ ನೀಡಿದ್ದೇನೆ.

ಪೊಲೀಸರು ನನ್ನನ್ನು ನಂತರ ಠಾಣೆಗೆ ಕರೆಯಿಸಿ ಆರೋಪಿತರನ್ನು ತೋರಿಸಿ ಮರುಹೇಳಿಕೆ ಪಡೆದಿಲ್ಲ.

(ಈ ಹಂತದಲ್ಲಿ ಸಾ.ಅ.ರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟಿಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಪ್ರತಿಕೂಲ ಸಾಕ್ಷ್ಯ ನೀಡಿರುವುದು ಮನದಟ್ಟಾಗಿರುವುದರಿಂದ, ಕೋರಿರುವ ಅನುಮತಿಯನ್ನು ನೀಡಲಾಯಿತು)

**<u>ಪಾಟಿಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ.</u>**

ದಿನಾಂಕಃ 02-05-2024 ರಂದು ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ 3 ಜನ ಆರೋಪಿತರನ್ನು ತೋರಿಸಿದ್ದಾರೆ ಎನ್ನುವುದು ಸರಿಯಲ್ಲ. ಆರೋಪಿ-2 ಇವಳು ಮಾರುತಿ ಎನ್ನುವವನ ಜೊತೆಗೆ ಅನೈತಿಕ ಸಂಬಂಧ ಹೊಂದಿರುವ ವಿಚಾರ ಬಸವರಾಜನಿಗೆ ಗೊತ್ತಾಗಿ ಅವನು ತೊಂದರೆ ಮಾಡಬಹುದು ಎಂದು ಕೊಲೆ ಮಾಡಿದ್ದಾರೆ ಎಂದು ಒಪ್ಪಿಕೊಂಡ ವಿಷಯ ನನಗೆ ಗೊತ್ತಾಯಿತು ಎನ್ನುವುದು ನಿಜ.

ನಂತರ ಅವನು ಮೋಟರ್ ಸೈಕಲ್ ಮೇಲೆ ಬರುವಾಗ ಕಟ್ಟೆಗೆಯಿಂದ ಹೊಡೆದು ಅಪಘಾತವಾದ ಹಾಗೆ ಬಿಂಬಿಸಿರುತ್ತಾರೆ ಎಂಬ ವಿಷಯ ಗೊತ್ತಾಯಿತು ಎನ್ನುವುದು ನಿಜ. ಆ ಬಗ್ಗೆ ದಿನಾಂಕಃ 02.05.2024 ರಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ.

ದಿನಾಂಕಃ 03-05-2024 ರಂದು 3ನೇ ಆರೋಪಿ - ಸುನೀಲ ಭಜಂತ್ರಿ ಯನ್ನು ಠಾಣೆಯಲ್ಲಿ ನಮಗೆ ತೋರಿಸಿ ಅವನೇ ಕೊಲೆ ಮಾಡಿದ್ದಾನೆ ಎಂಬ ವಿಷಯ ಠಾಣೆಯಲ್ಲಿ ಗೊತ್ತಾಯಿತು ಎನ್ನುವುದು ನಿಜ.

**<u>ಪಾಟಿಸವಾಲುಃ ಆರೋಪಿತರ ಪರ ಶ್ರೀ. ಎಸ್.ಆರ್.ಕೆ. ವಕೀಲರಿಂದ.</u>**

ಪೊಲೀಸರು ಬಸವರಾಜನ ಕೊಲೆ ವಿಚಾರ ಕುರಿತು ನನ್ನ ಹೇಳಿಕೆ ಪಡೆದುಕೊಂಡಿಲ್ಲ. ಶವ ನೋಡಲು ಹೋದಾಗ ಯಾರು ಕೊಲೆ ಮಾಡಿದ್ದಾರೆ ಎಂದು ಗೊತ್ತಿರಲಿಲ್ಲ. ಆ ದಿನ ಸಂಜೆವರೆಗೂ ಗೊತ್ತಾಗಿರಲಿಲ್ಲ. ಘಟನೆ ನಡೆದ 5 ದಿನಗಳ ನಂತರ ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿದ್ದರು. ಅದರ ಮಧ್ಯ ನನ್ನನ್ನು ಠಾಣೆಗೆ ಕರೆಯಿಸಿಲ್ಲ. ಆರೋಪಿತರನ್ನು ಪೊಲೀಸರು ನನಗೆ ಠಾಣೆಯಲ್ಲಿ ತೋರಿಸಿಲ್ಲ. ಆರೋಪಿ-2 ಇವಳು ಮಾರುತಿ ಜೊತೆಗೆ ಅನೈತಿಕ ಸಂಬಂಧ ಹೊಂದಿದ ವಿಷಯ

ಬಸವರಾಜನಿಗೆ ಗೊತ್ತಾಗಿ ಅವನು ತೊಂದರೆ ಕೊಡಬಹುದು ಎಂದು ಕೊಲೆ ಮಾಡಿದ್ದಾರೆ ಎಂಬ ವಿಷಯ ಊರ ಜನರು ಹೇಳಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಊರ ಜನರಿಂದ ವಿಷಯ ಗೊತ್ತಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

20-02-2026
ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಸಂಚಾರಿ ನ್ಯಾಯಾಲಯ, ಹುನಗುಂದ.

**S.C. 53/2024.**

# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಸಂಚಾರಿ ನ್ಯಾಯಾಲಯ ಹುನಗುಂದ, ಇವರ ನ್ಯಾಯಾಲಯದಲ್ಲಿ.

**<u>ಸತ್ರ ಮೊಕದ್ದಮೆ ಸಂಖ್ಯೆ 53/2024.</u>**

| | | | |
|---|---|---|---|
| ಹೆಸರು | : | ಕರಡೆಪ್ಪ ವಾಲಿಕಾರ | ಫ್ರಾಸಾ-10 |
| ತಂದೆಯ ಹೆಸರು | : | ಶಿವಪ್ಪ | ಚಾಸಾ-07 |
| ವಯಸ್ಸು | : | 60 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಾಸಸ್ಥಳ | : | ಕರಡಿ | |

ದಿನಾಂಕಃ 20-02-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.</u>**

ಆರೋಪಿ-1 ಪರಿಚಯ. ಈಗ ಒಂದು ದಾಖಲೆ ನೋಡುತ್ತಿದ್ದು ಅದರ ಮೇಲಿನ ಸಹಿ ನನ್ನದೇ ಇದ್ದು ಅದನ್ನು ಈಗಾಗಲೇ ನಿಪಿ-12 ಅಂತಾ ಗುರುತಿಸಲಾಗಿದ್ದು, ಸಹಿಯನ್ನು ನಿಪಿ-12(ಬಿ) ಅಂತಾ ಗುರುತಿಸಲಾಯಿತು. ಸ್ಥಳದಲ್ಲಿ 4 ಪೋಟೋಗಳನ್ನು ತೆಗೆದಿದ್ದು ಅವುಗಳನ್ನು ನಿಪಿ-13 ರಿಂದ 16 ಅಂತಾ ಗುರುತಿಸಲಾಗಿದೆ. ಅವುಗಳನ್ನು ಯಾವ ವಿಷಯಕ್ಕೆ ತೆಗೆದಿದ್ದಾರೆ ನನಗೆ ಗೊತ್ತಿಲ್ಲ. ಸದರಿ ಜಪ್ತ ಪಂಚನಾಮೆ ನಿಪಿ-12 ರಲ್ಲಿ ಬರೆದ ವಿಷಯ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿಲ್ಲ, ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ.

(ಈ ಹಂತದಲ್ಲಿ ಸಾ.ಅ.ರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟಿಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಪ್ರತಿಕೂಲ ಸಾಕ್ಷ್ಯ ನೀಡಿರುವುದು ಮನದಟ್ಟಾಗಿರುವುದರಿಂದ, ಕೋರಿರುವ ಅನುಮತಿಯನ್ನು ನೀಡಲಾಯಿತು)

**<u>ಪಾಟಿಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ.</u>**

ದಿನಾಂಕಃ 02-05-2024 ರಂದು ನನ್ನ ಹಾಗೂ ಚಾಸಾ-7 ರವರನ್ನು ಇಳಕಲ್ ಪೊಲೀಸಠಾಣೆಗೆ ಕರೆಯಿಸಿ ಅಲ್ಲಿ 1ನೇ ಆರೋಪಿ ಮಾರುತಿ ಭಜಂತ್ರಿ ಇವನನ್ನು ತೋರಿಸಿ ವಿಚಾರಣೆಗೆ ಒಳಪಡಿಸಿದಾಗ ಕೊಲೆ ಮಾಡಿದ ವಿಚಾರ ಒಪ್ಪಿಕೊಂಡು ತನ್ನ ಜೊತೆ ಬಂದಲ್ಲಿ ಕೊಲೆ ಮಾಡಲು ಉಪಯೋಗಿಸಿದ ಬಡಿಗೆ ಹಾಗೂ ಸ್ಥಳವನ್ನು ತೋರಿಸುವುದಾಗಿ ಹೇಳಿ ಒಪ್ಪಿಕೊಂಡಿದ್ದು ನಂತರ ನಮ್ಮನ್ನು ಹಾಗೂ ಆರೋಪಿತರನ್ನು ಪೊಲೀಸಠಾಣೆಯಿಂದ ಮುಂಜಾನೆ 6.45 ಗಂಟೆಗೆ ಕರೆದುಕೊಂಡು ನಂದವಾಡಗಿಯ ಬ್ರಿಡ್ಜ ಹತ್ತಿರವಿರುವ ಹಳ್ಳದ ಸೇತುವೆ ಹತ್ತಿರ ಹೋಗಿ ಅಲ್ಲಿ ಗಿಡಗಳ ಕಂಟಿಯಲ್ಲಿ ಒಗೆದ

ಒಂದು ಕಟ್ಟಿಗೆ ಬಡಿಗೆಯನ್ನು ತೋರಿಸಿ ಅದೇ ಬಡಿಗೆಯಿಂದ ಬಸವರಾಜನಿಗೆ ಹಲ್ಲೆ ಮಾಡಿದ್ದೇನೆ ಎಂದು ತೋರಿಸಿದ ಎನ್ನುವುದು ಸರಿಯಲ್ಲ. ಪೊಲೀಸರು ಸದರಿ ಬಡಿಗೆಯನ್ನು ಪಂಚನಾಮೆ ಅಡಿಯಲ್ಲಿ ಅಮಾನತುಪಡಿಸಿಕೊಂಡಿದ್ದಾರೆ ಎನ್ನುವುದು ಸರಿಯಲ್ಲ.

ನಂತರ ಕಾಲ್ನಡಿಗೆಯಲ್ಲಿ ನೀರಿನ ಹರಿವಿನ ಹತ್ತಿರ ಕರೆದುಕೊಂಡು ಬಂದು ಅಲ್ಲಿ ಒಂದು ಶ್ರೀಗಂಧದ ಮರದಿಂದ ಕಟ್ಟಿಗೆಯನ್ನು ಮುರಿದುಕೊಂಡ ಬಗ್ಗೆ ಸ್ಥಳ ತೋರಿಸಿದ ಎನ್ನುವುದು ಸರಿಯಲ್ಲ. ಸದರಿ ಸ್ಥಳದಲ್ಲಿ ಪಂಚನಾಮೆ ಮಾಡಿದ್ದಾರೆ ಎನ್ನುವುದು ಸರಿಯಲ್ಲ.

ನಂತರ ಕರಡಿ ಗ್ರಾಮದ ಅಂಬೇಡ್ಕರ ಸರ್ಕಲ್ ಬಳಿ ಕರೆದುಕೊಂಡು ಹೋಗಿ ಅಲ್ಲಿ ಕೊಲೆಗೆ ಒಳಸಂಚು ಮಾಡಿದ ಜಾಗೆ ಅಂತಾ ತೋರಿಸಿದ್ದು ಅಲ್ಲಿಯೂ ಸಹ ಪಂಚನಾಮೆ ಮಾಡಿ ಒಟ್ಟು ಮುಂಜಾನೆ 6.45 ರಿಂದ ಬೇರೆ ಬೇರೆ ಸ್ಥಳಗಳಿಗೆ ಕರೆದುಕೊಂಡು ಹೋಗಿ ಆರೋಪಿ ತೋರಿಸಿದ ಘಟನಾ ಸ್ಥಳ ಹಾಗೂ ಕಟ್ಟಿಗೆ ಬಡಿಗೆಯನ್ನು ಪಂಚನಾಮೆ ಜರುಗಿಸಿ ಅಮಾನತುಪಡಿಸಿಕೊಂಡಿದ್ದಾರೆ ಎನ್ನುವುದು ಸರಿಯಲ್ಲ. ನಿಪಿ-12 ಓದಿ ತಿಳಿದು ನಿಪಿ-12(ಬಿ) ಅಂತಾ ಸಹಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ನಿಪಿ-13 ರಿಂದ 15 ಫೋಟೋ ತೆಗೆದಿದ್ದಾರೆ ಎನ್ನುವುದು ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

(ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು)

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

20-02-2026

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಸಂಚಾರಿ ನ್ಯಾಯಾಲಯ, ಹುನಗುಂದ.